ಆರು ತಿಂಗಳ ಬದಲು ಎರಡರಿಂದ ಮೂರು ವರ್ಷಗಳ ಅವಧಿಗೆ ನಿಗದಿಗೊಳಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುವುದೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯಮಂತ್ರಿಗಳು).—ಒಂದು ಕುಟುಂಬದ ಆದಾಯ ಆಗಿಂದಾಗೆ ಬದಲಾವಣೆಯಾಗುವ ಸಾಧ್ಯತೆ ಇದೆ. ಅಲ್ಲದೆ ಹುದ್ದೆಗಳ ಮಿಸಲಾತಿಯ ಸೌಲಭ್ಯವು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ದೊರೆಯುವುದು ಅಪೇಕ್ಷಣೀಯ, ಆದುದರಿಂದ ಆದಾಯದ ಪ್ರಮಾಣಪತ್ರದ ಕಾಲಾವಧಿಯನ್ನು 2–3 ವರ್ಷಗಳೆಂದು ನಿಗದಿಪಡಿಸುವುದು ಅಪೇಕ್ಷಣೀಯವಲ್ಲ.

ವಿಷಯ : ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸುವ ಬಗ್ಗೆ.

ಪ್ರ. 256 (114) ಶ್ರೀ ಹೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಕೈಗಾರಿಕಾ ಸಚಿವರು ಹಾವೇರಿಯಲ್ಲಿ ಮಾತನಾಡುತ್ತಾ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸುವುದಾಗಿ ಹೇಳಿದ ವರದಿ ನಿಜವೆ;

(ಆ) ಹಾಗಿದ್ದಲ್ಲಿ ನಿವೃತ್ತಿ ವಯಸ್ಸನ್ನು ಏಚಿತವಾಗಿ ಯಾವಾಗ ಹೆಚ್ಚಿಸಲಾಗುವುದು;

(ಇ) ಹಾಗಿದ್ದಲ್ಲಿ ಎಷ್ಟು ನೌಕರರಿಗೆ ಇದು ಅನ್ವಯಿಸುತ್ತದೆ;

(ಈ) ನಿವೃತ್ತಿ ವಯಸ್ಸನ್ನು ಹೆಚ್ಚಿಸುವುದರಿಂದ ಸರ್ಕಾರಿ ನೇಮಕಾತಿಯನ್ನು ಮುಂದೂಡಲಾಗುವುದೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

(ಅ) ಅಲ್ಲ.

(ಆ) (ಇ) (ಈ) 'ಅ' ಭಾಗಕ್ಕೆ ಕೊಟ್ಟ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಆದಾಗ್ಯೂ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

Development of Kannada Script

250 (86) **Sri H. S. Muralidhar** (Gangavathi).—Will the Minister of State for Youth Services and Sports be pleased to state :—

(*a*) Whether it has come to the notice of Government that Sri N. Umakanth and Sri N. Rajashekar have sent a notice for a 50 years scheme in the matter of improvement of Kannada script and formation of dual language Typewriting Machines consists of both English and Kannada scripts, and to bring into force, the usage of simple Kannada script and to reform the Kannada script, etc. ;

(*b*) if so, the measures taken by the Government in respect of their notices ;

(*c*) whether Government has prepared any scheme in this regard, if so, its salient features ?

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ವಿಷಯ : ವಯಸ್ಸಾದ ಕ್ರೀಡಾಪಟುಗಳು ಹಾಗೂ ಕಲಾವಿದರಿಗೆ ಕೊಡಲಾದ ಗೌರವ ಧನ.

ಪ್ರ. 251 (77) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಯುವಜನ ಸೇವೆಗಳ ಹಾಗೂ ಕ್ರೀಡಾರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ವಯೋವೃದ್ಧ ಪೈಲ್ವಾನರು, ಸಂಗೀತಗಾರರು, ಕ್ರೀಡಾಪಟುಗಳು, ಕಲಾವಿದರಿಗೆ ವಿಶ್ರಾಂತಿ ವೇತನ ನೀಡಲಾಗಿದ್ದು ಅದನ್ನು ಮುಂದುವರಿಸಲಾಗುತ್ತದೆಯೇ ;

(ಆ) ಎಷ್ಟು ಜನರಿಗೆ ವಿಶ್ರಾಂತಿ ವೇತನವನ್ನು ಮಂಜೂರು ಮಾಡಲಾಗಿದೆ ;

(ಇ) ವಿಶ್ರಾಂತಿ ವೇತನದ ಮೊಬಲಗು ಎಷ್ಟು ?

ಶ್ರೀ ಜೀವರಾಜ್ ಆಳ್ವ (ಮಾನ್ಯ ಯುವಜನ ಸೇವಾ ರಾಜ್ಯ ಸಚಿವರು).—

(ಅ) ಪೈಲ್ವಾನರು ಮತ್ತು ಕ್ರೀಡಾಪಟುಗಳು; ವಿಶ್ರಾಂತಿ ವೇತನವನ್ನು ಮುಂದುವರಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ; ಸಂಗೀತಗಾರರು ಮತ್ತು ಕಲಾವಿದರು: ಹೌದು.

(ಆ) ಪೈಲ್ವಾನರು ಮತ್ತು ಕ್ರೀಡಾಪಟುಗಳು: 39 ; ಸಂಗೀತಗಾರರು ಮತ್ತು ಕಲಾವಿದರು: 1716